ಬಂದಿದೆಯೆ:

ಅ) ಹಾಗಿದ್ದಲ್ಲಿ, ಈ ಬಗ್ಗೆ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಕಣ್ಣಿ ನೀರಾವರಿ ರಾಜ್ಯ ಸಚಿವರು):

ಆ) ಬಂದಿದೆ.

ಇ) 1998-99ನೇ ಸಾಲಿನಲ್ಲಿ ಕಣ್ಣಿ ನೀರಾವರಿ ವಿಭಾಗ, ಬೀದರ್‌ನಲ್ಲಿ ಗುಣಮಟ್ಟ ಸಾಮಗ್ರಿಗಳ ಬಳಕೆಯಲ್ಲಿ ಅವ್ಯವಹಾರ ಕಂಡು ಬಂದ ಪ್ರಯುಕ್ತ ಸರ್ಕಾರವು ಈ ಕೆಳಗಿನಂತೆ ಕ್ರಮ ಕೈಗೊಂಡಿದೆ:

1) ಶ್ರೀ ಎಸ್.ಡಿ. ಹೊಂಗಲ್, ಕಾರ್ಯನಿರ್ವಾಹಕ ಇಂಜಿನಿಯರ್, ಕಣ್ಣಿ ನೀರಾವರಿ ವಿಭಾಗ, ಬೀದರ್ ಇವರನ್ನು ಅಮಾನತ್ತುಗೊಳಿಸಲಾಗಿದೆ.

2) ಶ್ರೀ ಹೆಚ್.ಎಂ.ಜ್ಞಾನಪ್ರಕಾಶ, ಪ್ರಥಮದರ್ಜೆ ಗುತ್ತಿಗಾದಾರರು ಇವರನ್ನು ಅಮಾನತ್ತಿನಲ್ಲಿರಿಸಿ ನಂತರ ವಿಚಾರಣೆಯನ್ನು ಕಾಯ್ದಿರಿಸಿ ಅಮಾನತ್ತನ್ನು ರದ್ದುಗೊಳಿಸಿ ಕಣ್ಣಿ ನೀರಾವರಿ ಬೀದರ್ ವಿಭಾಗದಿಂದ ಕಣ್ಣಿ ನೀರಾವರಿ ವಿಭಾಗ ಧಾರವಾಡಕ್ಕೆ ವರ್ಗಾವಣೆ ಮಾಡಲಾಗಿದೆ.

3) ಪ್ರಕರಣವು ಇನ್ನೂ ವಿಚಾರಣೆ ಹಂತದಲ್ಲಿದೆ.

ರಾಜ್ಯದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಸಬ್ಸಿಡಿ.

1217(2744)

ಶ್ರೀ ಗೋಪಾಲ ಪೂಜಾರಿ.ಕೆ.(ಬೈಂದೂರು): ಮಾನ್ಯ ಬೃಹತ್ ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೈಗಾರಿಕೆಗಳ ಬಗ್ಗೆ ಕಳೆದ 3 ವರ್ಷಗಳಲ್ಲಿ ಎಷ್ಟು ಸಬ್ಸಿಡಿಯನ್ನು ವಿತರಣೆ ಮಾಡಲಾಗಿದೆ?

ಆ) ಅದರ ಪೈಕಿ ರಾಜ್ಯದ ಉದ್ದಿಮೆದಾರರಿಗೆ ಎಷ್ಟು ವಿತರಣೆ ಮಾಡಲಾಗಿದೆ?

ಇ) ಮಂಗಳೂರು ಜಿಲ್ಲೆ-ಬೆಂಗಳೂರು ಜಿಲ್ಲೆ ಸುತ್ತಮುತ್ತಲಿನವರಿಗೆ ವಿತರಣೆಯಾಗಬೇಕಾದ ಸಬ್ಸಿಡಿಯ ಬಾಕಿ ಎಷ್ಟು?

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು):

ಅ) ರಾಜ್ಯದಲ್ಲಿ ಕೈಗಾರಿಕೆಗಳಿಗೆ ಕಳೆದ ಮೂರು ವರ್ಷಗಳಿಂದ ಸಬ್ಸಿಡಿಯನ್ನು ಈ ಕೆಳಕಂಡಂತೆ ಬಿಡುಗಡೆ ಮಾಡಲಾಗಿದೆ.

1. 1997-98: ರೂ.28.50 ಕೋಟಿ ಬಿಡುಗಡೆ ಮಾಡಲಾಗಿದೆ.

2. 1998-99: ರೂ.23.53 ಕೋಟಿ ಸರ್ಕಾರದ ಆಯವ್ಯಯದಿಂದ ಮತ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಬಾಂಡ್ ಮೂಲಕ ಹಣ ಸಂಗ್ರಹಿಸಿ ರೂ.149.62 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಒಟ್ಟು ರೂ.173.15 ಕೋಟಿ ಬಿಡುಗಡೆಯಾಗಿದೆ.

3. 1999-2000: ರೂ.80.38 ಕೋಟಿಗಳನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಬಾಂಡ್ ಮೂಲಕ ಹಣ ಸಂಗ್ರಹಿಸಿ ಏಪ್ರಿಲ್ ಹಾಗೂ ಮೇ ತಿಂಗಳ 1999ರಲ್ಲಿ ಬಿಡುಗಡೆ ಮಾಡಲಾಗಿದೆ. ಹಾಗೂ ರೂ.36.00 ಕೋಟಿಗಳನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಬಾಂಡ್ ಮೂಲಕ ಹಣ ಪಡೆದು ದಿನಾಂಕ 10.3.2000ರಂದು ರಾಜ್ಯ ಸಹಾಯ ಧನ ಬಿಡುಗಡೆಗೆ ಆದೇಶ ಹೊರಡಿಸಿದೆ.

ಆ) ಈ ಎಲ್ಲಾ ಮೊತ್ತವನ್ನು ಕರ್ನಾಟಕ ಸಣ್ಣ ಕೈಗಾರಿಕೆಗಳಿಗೆ ಸಹಾಯ ಧನ ನೀಡಲಾಗಿದೆ. ಇದರಲ್ಲಿ ಬಹುಪಾಲು ಉದ್ದಿಮೆದಾರರು ಕರ್ನಾಟಕದವರೇ ಆಗಿರುತ್ತಾರೆ.

ಇ) ಮಂಗಳೂರು ಜಿಲ್ಲೆ, ಬೆಂಗಳೂರು ಜಿಲ್ಲೆ ಸುತ್ತಮುತ್ತಲದವರಿಗೆ ಬಿಡುಗಡೆ ಮಾಡಬೇಕಾದ ಸಬ್ಸಿಡಿ ಬಾಕಿ ಈ ಕೆಳಗಿನಂತಿದೆ.

1. ಮಂಗಳೂರು ಜಿಲ್ಲೆ : 1411.43 ಲಕ್ಷಗಳು
(ಫೆಬ್ರವರಿ 2000 ಅಂತ್ಯದವರೆಗೆ)

2. ಬೆಂಗಳೂರು (ಗ್ರಾ) ಜಿಲ್ಲೆ : 2484.87 ಲಕ್ಷಗಳು
(ಮಾರ್ಚ್ 2000 ಅಂತ್ಯದವರೆಗೆ)

3. ಬೆಂಗಳೂರು(ನಗರ) ಜಿಲ್ಲೆ : 3704.60 ಲಕ್ಷಗಳು

(ಮಾರ್ಚ್ 2000 ಅಂತ್ಯದವರೆಗೆ)

ಕೆ.ಐ.ಎ.ಡಿ.ಬಿ.ಯವರು ಅಭಿವೃದ್ಧಿಪಡಿಸಿದ ಕೈಗಾರಿಕಾ ಪ್ರದೇಶಗಳ ವಿಸ್ತೀರ್ಣ.

2218(2745)

ಶ್ರೀ ಗೋಪಾಲ ಪೂಜಾರಿ.ಕೆ.(ಬೈಂದೂರು): ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಐ.ಎ.ಡಿ.ಬಿ.ಯವರು ರಾಜ್ಯದಲ್ಲಿ ಅಭಿವೃದ್ಧಿಪಡಿಸಿದ ಕೈಗಾರಿಕಾ ಪ್ರದೇಶದ ವಿಸ್ತೀರ್ಣ ಎಷ್ಟು?

ಆ) ಬೆಂಗಳೂರು-ಮಂಗಳೂರು ಸುತ್ತಮುತ್ತ ಪ್ರದೇಶದಲ್ಲಿ ಎಲ್ಲೆಲ್ಲಿ ಅಭಿವೃದ್ಧಿ ಆಗಿದೆ?

ಇ) ಖಾಲಿ ಸ್ಥಳ ಎಲ್ಲೆಲ್ಲಿವೆ? (ಮಾಹಿತಿ ಕೊಡಿ)

ಈ) ಹೊಸ ಪ್ರದೇಶ ಎಲ್ಲೆಲ್ಲಿ ಅಭಿವೃದ್ಧಿಪಡಿಸಲಾಗಿದೆ?

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು):

ಅ) 25,027-26 ಎಕರೆ

ಆ) ಬೆಂಗಳೂರು-ಮಂಗಳೂರು ಸುತ್ತಮುತ್ತ ಪ್ರದೇಶದಲ್ಲಿ ಕೈಗಾರಿಕಾ ಅಭಿವೃದ್ಧಿಯಾಗಿರುವ ವಿವರ ಈ ಕೆಳಕಂಡಂತಿದೆ.

ಜಿಲ್ಲೆ	ಕೈಗಾರಿಕಾ ಪ್ರದೇಶದ ಹೆಸರು	ಅಭಿವೃದ್ಧಿಪಡಿಸಿದ ವಿಸ್ತೀರ್ಣ
1. ಬೆಂಗಳೂರು	1. ಅತ್ತಿಬೆಲೆ	0-45
	2. ಬಿಡದಿ	836-73